SRI M. VEERAPPA MOILY.—Mr. Speaker Sir, the Government has laid down certain system to scrutinise the fake tickets and it is properly done. In respect of prize tickets of the denomination of Rs. 5,000 and above, it is sent to the Senior Deputy Director of the Government Press and he will in turn, send it to the Forensic Laboratory It is only when this is verified and they certify that this is a genuine ticket then only we will award this. Wherever fake tickets are coming we will immediately hold them and prosecute them. We will not spare them. There is no scope at all for any fake or bogus or anybody making wrong claims to make some payment. It is properly scrutinised, verified and then the payment is made.

Investigation and Construction of Minor Irrigation Tanks in Bijapur District.

510 SRI M.H. BEKINALKAR (Sindgi) — Will the Minister for Transport and Minor Irrigation be pleased to State.

(a) No. of M.I. Tanks under investigation and construction in Bijapur District.

(b) When they are going to be started.

(c) The agency fixed for the execution of the work of Yankanchi tank, Sindagi taluk?

SRI M.M.J. SADYOJATHA (Minister for Transport & Minor Irrigation).—

(a) There are 19 Minor Irrigation tank works under investigation and 15 M.I. tank works under construction.

(b) As 19 works are still under investigation, specific dates of starting cannot be furnished.

(c) No Agency is fixed.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಅಧ್ಯಕ್ಷರೆ (ಸಿ) ಲಿಸ್ಟ್‌ನಲ್ಲಿ ಇದ್ದಂಥ ಕೆರೆಗಳನ್ನು ತೆಗೆದುಕೊಳ್ಳ ತಕ್ಕಂಥ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಬಿಜಾಪುರ ಜಿಲ್ಲೆಗೆ ಸ್ಕೇರ್‌ಸಿಟಿ ಸಂದರ್ಭದಲ್ಲಿ ಬಂದಾಗ ಹೇಳಿದ್ದರು. ಇವೊತ್ತಿನವರೆಗೂ ಅವುಗಳನ್ನು ತೆಗೆದುಕೊಳ್ಳದೇ ಹಾಗೆ ಉಳಿದಿವೆ. ಈಗಲಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದರಲ್ಲಿ ಕೆಲವು ಕೆರೆಗಳನ್ನು ತೆಗೆದುಕೊಳ್ಳುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಅದು ಒಂದು ದೊಡ್ಡ ಲಿಸ್ಟ್ ಇದೆ. ಮಾನ್ಯ ಸದಸ್ಯರಿಗೆ ಆ ಲಿಸ್ಟ್ ಒದಗಿಸಿ ಕೊಡುತ್ತೇನೆ.

ಶ್ರೀ ಎಂ. ಎಚ್. ಬೆಕಿನಾಳ್ಕರ್.—೧೫ ಕರೆಗಳು ಎಂದು ಇಲ್ಲಿ ಕಾಣಿಸಿದ್ದೀರಿ. ಇದರಲ್ಲಿ ಬೆಕಿನಾಳ್ಕರ್ ಕೆರೆ ಸೇರಿದೆಯೇ ಇಲ್ಲವೇ ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬೆಕಿನಾಳ್ಕರ್ ಕೆರೆ ಸೇರಿಲ್ಲ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಚಾಲೋ ಮಾಡಿದರು. ಇವರು ಬಂದಮೇಲೆ ಬಂದ್ ಮಾಡಿದರು ಮುಂದೆ ಯಾವಾಗ ಚಾಲೋ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಾಗೆ ಇದು ಯಾವ ಜಿಲ್ಲೆಗೆ ಸೇರಿದೆ ತಿಳಿಸಬೇಕು.

ಶ್ರಿ ಎಂ.ಎಂ.ಜೆ. ಸದ್ಯೋಜಾತ.—ಇದು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂತಾದ್ದು. ಇದು ಒಂದು ದೊಡ್ಡ ಲಿಸ್ಟ್ ಇದೆ.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಸಣ್ಣ ನೀರಾವರಿ ಯೋಜನೆಯಲ್ಲಿ ಕೆರೆಗಳನ್ನು ಕಟ್ಟುವಾಗ ಇಂಜಿನಿಯರ್‌ಗಳು ೫೦೦ ಎಕರೆ ನೀರಾವರಿ ಆಗುತ್ತದೆ ಎಂದು ಹೇಳುತ್ತಾರೆ. ಆನಂತರ ನೋಡಿದರೆ ಆ ಕೆರೆಗಳಿಂದ ೫೦ ಎಕರೆ ಕೂಡ ನೀರಾವರಿ ಆಗುವುದಿಲ್ಲ. ಬೇಕಾದಷ್ಟು ದುಡ್ಡು ಖರ್ಚು ಮಾಡಿ ಸರ್ಕಾರದವರು ಸಾಕಷ್ಟು ಪ್ರಯತ್ನಪಟ್ಟು ಕಟ್ಟಿಸಿದಂಥ ಕೆರೆಗಳಲ್ಲಿ ಸರಿಯಾಗಿ ನೀರಾವರಿ ಕೆಲಸ ಆಗಲಿಲ್ಲ ಅಂದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮಾನ್ಯ ಸದಸ್ಯರು ಇಂಥ ಕೆರೆಯಲ್ಲಿ ಸರಿಯಾಗಿ ನೀರಾವರಿ ಆಗುತ್ತಿಲ್ಲ ಎಂದು ನಿರ್ದಿಷ್ಟವಾಗಿ ತಿಳಿಸಿದರೆ ನಾವು ಪರಿಶೀಲನೆ ಮಾಡುತ್ತೇವೆ.

Percentage of Govt. Employees out of the total Population of the State.

607 SRI G.R. RAJU GOWDA (Hanur) will the Minister for Finance and Tourism be pleased to state.—

(a) the percentage of Government employees out of the total population of the State.

(b) the total amount of salary per mensem to be disbursed to them.

(c) the percentage of this amount out of the annual budget of the State?

SRI M.VEERAPPA MOILY (Minister for Finance & Tourism).—

(a) 1.04%

(b) Rs: 2462 42 lakhs.

(c) Revenue expenses 30.30%

ಶ್ರೀ ಜಿ. ರಾಜೂಗೌಡ.—ರಾಜ್ಯದಲ್ಲಿರತಕ್ಕಂಥ ಅಧಿಕಾರಿಗಳಿಗೆ ಒಂದು ತಿಂಗಳಿಗೆ ೨೪,೬೨,೪೩೦೦ ರೂಪಾಯಿ ಸಂಬಳ ಬಟವಾಡೆ ಮಾಡುತ್ತಿದ್ದೀರಿ. ಆದರಲ್ಲಿ ಐ.ಎ.ಎಸ್. ಅಧಿಕಾರಿಗಳು ಎಷ್ಟು ಜನ ಇದ್ದಾರೆ, ಅವರಿಗೆ ಹೋಗತಕ್ಕ ಸಂಬಳ ಎಷ್ಟು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಹತ್ತಿರ ಐ.ಎ.ಎಸ್. ಅಧಿಕಾರಿಗಳದ್ದು, ಬೇರೆ ಇತರೆ ಅಧಿಕಾರಿಗಳದ್ದು ವಿವರ ಇಲ್ಲ. ಮಾನ್ಯ ಸದಸ್ಯರು ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ.—ರಾಜ್ಯದಲ್ಲಿ ನಾನಾ ಇಲಾಖೆಗಳಲ್ಲಿ ಸುಮಾರು ೪೫ ಸಾವಿರ ಹುದ್ದೆಗಳು ಖಾಲಿ ಇವೆ. ಕೆಲವು ಹುದ್ದೆಗಳನ್ನು ಭರ್ತಿ ಮಾಡುವಾಗ ಮಿತವ್ಯಯದ ದೃಷ್ಟಿಯಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದೇ ಮೇಲ್ಮಟ್ಟದಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ ಈಗ ತಮ್ಮ ಬಜೆಟ್‌ನಲ್ಲಿ ಶೇಕಡ ೩೦ರಷ್ಟು ಅಧಿಕಾರಿಗಳಿಗೆ ಹೋಗುತ್ತದೆಂದು ಹೇಳುತ್ತೀರಿ. ಇದರಲ್ಲಿ ಹಿರಿಯ ಅಧಿಕಾರಿಗಳಿಗೆ ಎಷ್ಟು ಹೋಗುತ್ತದೆ ?